

**ಲಕ್ಷ್ಮಣ ವಿ.ಎ.**

ಕಲೆ: ಬಸವರಾಜ ಎಸ್. ಕಲೆಗಾರ

# ಯಕ್ಷ ಪ್ರಶ್ನೆ

ತೊಳೆದಿಟ್ಟ ಹಲಸಿನ
ತೊಳೆಯಂತಹ ಮೈ ಬಣ್ಣದ ಮುದ್ದಿನ
ಪುಟ್ಟಿ ಇವಳು
ಚಿತ್ತೂ ಕಾಟಿಲ್ಲದ ಕಾಪಿಬುಕ್ಕಿನ
ಚೊಕ್ಕ ಕ್ಯಾಲಿಗ್ರಾಫಿ ಬರಹದ
ನಡೆಯಂತವಳು
ಹೊಸಿಲಾಚೆಯೀಚೆ ನಿನ್ನೆ
ಮೊನ್ನೆಯತನಕ ಸಂಕೋಚಭರಿತ
ಸಂಭ್ರಮದಲ್ಲಿ ಓಡಾಡಿಕೊಂಡಿದ್ದವಳು
ಇಬ್ಬನಿಯ ಮುಂಜಾವಿನಲಿ
ಮನೆಯೆದುರು ಮೂಡಿದ ಮುದ್ದಾದ ಹೂವಿನ
ರಂಗೋಲಿಯಂತವಳು

ರಿಲೇ ಓಟದಲ್ಲಿ
ಮೊದಲ ಸ್ಥಾನ ಪಡೆದವಳು
ಮೊನ್ನೆ ಒಲೆಯ ಮೇಲಿನ ಉಕ್ಕುವ
ಹಾಲು
ಉಳಿಸಲು ಅವಸರದಲಿ ಹಾಲಿನಿಂದ ಓಡಿ
ಕಾಲು ಉಳುಕಿಸಿಕೊಂಡವಳು
ಗಣಿತದಲ್ಲಿ ತುಸು ವೀಕು
ಲಕ್ಷ್ಯಕೊಟ್ಟು ಕಲಿಯಬೇಕಿನ್ನೂ ಲೆಕ್ಕ
ಎಳೆವಯದಲ್ಲೇ ಅವ್ವನ
ಕಳೆದುಕೊಂಡವಳ ಪುಟ್ಟ ತಲೆಯ ಮೇಲೆ
ಇಡಿ ಸಂಸಾರದ ಭಾರ

ಊಟಕ್ಕೆ ಕುಳಿತ ಅಪ್ಪನ ತಾಟಿಗೆ
ಹಿಡಿಯವಲಕ್ಕಿ ತುಸು ಹೆಚ್ಚೆ ಬಡಿಸುವಳು
ಪ್ರೀತಿಯಿಂದ

ತಂದ ಹೊಸ ಪೆನ್ನು ತಮ್ಮನಿಗೆ ಕೊಟ್ಟು
ಮುಚ್ಚಳವಿಲ್ಲದ ಹಳೆಯ
ಪೆನ್ನು ತನಗೆ ಸಾಕೆನ್ನುವವಳು

ಪುಟ್ಟಿ ತೊಳೆದರೆ ಎಲ್ಲಾ
ಮಿರಿ ಮಿರಿ ಮಿಂಚಿ ಹೊಳೆಯುತ್ತವೆ
ಸೆಗಣಿ ಸಾರಿಸಿದ ನೆಲ
ಚಿನ್ನದ ಹಾಗೆ ಪಾತ್ರೆ ಕೊಡ ಬಟ್ಟೆ
ತಟ್ಟೆ ಲೋಟ ಕಲೆಗಳ ಕೊಳೆ

ಮೊನ್ನೆಯಷ್ಟೇ
ಮೈ ನೆರೆದವಳು ಹೊಸಿಲು
ದಾಟಲು ಬೆಚ್ಚಿ ಬೀಳುತ್ತಾಳೆ ಈಗ

ಒಂದೇ ಚಿಂತೆ ಅವಳಿಗೆ

ಬೀದಿ ಹಾಯುವಾಗ ಪುಟ್ಟ
ಮೊಲೆಗಳ ಮೇಲೆ ಬಿದ್ದ ಕೆಟ್ಟ ನೋಟಗಳ
ಎಷ್ಟು ಸ್ವಚ್ಛವಾಗಿ ತೊಳೆದರೂ
ಹಸನಾಗುತಿಲ್ಲ...
ಅಪ್ಪನಿಗೆ ಹೇಳುವುದು ಹೇಗೆ?

